ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಆಡಳಿತದಲ್ಲಿ ಬರುವ ಕೆಲವು ಸಿಬ್ಬಂದಿಗಳಿಗೆ ಸಂಬಳ ನೀಡದಿರುವ ಬಗ್ಗೆ

943 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲಾ ಪಂಚಾಯತ್ ಆಡಳಿತದಲ್ಲಿ ಬರುವ ತೋಟಗಾರಿಕೆ ಪಶುಸಂಗೋಪನೆ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಕೆಲವು ಸಿಬ್ಬಂದಿಗೆ ಕಳೆದ ಆರು ತಿಂಗಳಿಂದ ಸಂಬಳ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಷ್ಟು ಜನ ಸಿಬ್ಬಂದಿಗೆ ಸಂಬಳ ಬಾಕಿ ಇದೆ ಮತ್ತು ಎಷ್ಟು ಬಾಕಿ ಕೊಡಬೇಕಾಗಿದೆ (ತಾಲ್ಲೂಕುವಾರು) ವಿವರ ನೀಡುವುದು.

ಇ) ಈ ರೀತಿ ಸಂಬಳ ಕೊಡದಿರುವುದಕ್ಕೆ ಕಾರಣವೇನು? ಯಾವಾಗ ಕೊಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ತೋಟಗಾರಿಕೆ ಪಶುಸಂಗೋಪನೆ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಫೆಬ್ರವರಿ 2000ದವರೆಗೆ ವೇತನ ಪಾವತಿಸಿದೆ. ನವೆಂಬರ್ 99ರಲ್ಲಿ ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ ವೇತನ ಪಾವತಿ ಬಾಕಿ ಇದೆ.

ಆ) ನವೆಂಬರ್ 99ರ ಮಧ್ಯ ಭಾಗದಲ್ಲಿ ಸುಮಾರು 404 ಶಿಕ್ಷಕರು ಹೊಸದಾಗಿ ನೇಮಕಗೊಂಡಿದ್ದು ಇವರುಗಳಿಗೆ ಕೊಡಬೇಕಾಗಿರುವ ವೇತನ ಪಾವತಿ ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ಶಿಕ್ಷಕರ ಸಂಖ್ಯೆ	ಒಟ್ಟು ವೇತನ ಬಾಕಿ
		(ಲಕ್ಷಗಳಲ್ಲಿ)
ಶಿವಮೊಗ್ಗ	25	4.70
ಭದ್ರಾವತಿ	35	6.58
ತೀರ್ಥಹಳ್ಳಿ	82	15.42
ಹೊಸನಗರ	78	14.67
ಶಿಕಾರಿಪುರ	22	4.14
ಸೊರಬ	56	10.52
ಸಾಗರ	106	19.93
ಒಟ್ಟು	**404**	**75.96**

ಒಟ್ಟು ಪಾವತಿಗೆ ಬಾಕಿಯಿರುವ ಮೊಬಲಗು ಹೀಗಿದೆ.

1. ವೇತನ ಪಾವತಿಗೆ ಬಾಕಿ	ರೂ. 75.96
2. ಗಳಿಗೆ ರಜೆ ನಗದೀಕರಣ ಇತ್ಯಾದಿ	ರೂ. 270.03
	ರೂ. 345.99

ಇ) ವೇತನ ಪರಿಷ್ಕರಣೆಯಿಂದಾಗಿ ಸಂಬಳ ಪಾವತಿ ಮಾಡಲು ಬೇಕಾಗುವಂತಹ ಅನುದಾನ ಹೆಚ್ಚಿಗೆ ಬೇಕಾಗಿರುತ್ತದೆ. ಆದ್ದರಿಂದ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಮತ್ತು ಬಾಕಿ ವೇತನ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ

944 - ಶ್ರೀ ಆತ್ಮಾನಂತ ಎಂ.ಎಸ್. (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿನ ಜಿಲ್ಲಾ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಲಾಗುವುದೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಮಂಡ್ಯ ಜಿಲ್ಲಾ ಆಸ್ಪತ್ರೆಯನ್ನು 310 ಹಾಸಿಗೆಗಳಿಂದ 400 ಹಾಸಿಗೆಗಳಿಗೆ ಉನ್ನತೀಕರಿಸಿ ರೂ. 408 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಸಹ ಯೋಜನೆಯಡಿ ಒದಗಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ತುರ್ತು ಚಿಕಿತ್ಸೆ ವ್ಯವಸ್ಥೆ

947 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಪಟ್ಟಣವು ರಾಷ್ಟ್ರೀಯ ಹೆದ್ದಾರಿಗಳಾದ 4 ಮತ್ತು 48ರಲ್ಲಿದ್ದು ಪ್ರತಿನಿತ್ಯ ಸಾವಿರಾರು ವಾಹನಗಳ ಸಂಚಾರದಿಂದ ಆಕಸ್ಮಿಕ ಅಪಘಾತಗಳು ಉಂಟಾಗಿ ಜನ ಪ್ರಾಣಹಾನಿ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನೆಲಮಂಗಲ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ತುರ್ತು